16-7

12

<u>ಕರ್ನಾಟಕ ವಿಧಾನ ಪರಿಷತ್ತು</u>

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎನ್. ರವಿ ಕುಮಾರ್. ಇವರು ಮಂಡಿಸಿರುವ ಶೂನ್ಯ ವೇಳೆ ಪ್ರಸ್ತಾಪಕ್ಕೆ ಮಾನ್ಯ ಪೌರಾಡಳಿತ ಸಚಿವರ ಉತ್ತರ:**

**ಶೂನ್ಯ ವೇಳೆಯ ಪ್ರಸ್ತಾಪ**

ಆರು ತಿಂಗಳ ಹಿಂದೆ ಮೃತಪಟ್ಟ ಇಂಜಿನಿಯರ್ ಕೊಡಗಿಗೆ ವರ್ಗಾವಣೆಗೊಳಿಸಿರುವ ಕುರಿತು ಪತ್ರಿಕೆಯಲ್ಲಿ ಪ್ರಕಟವಾಗಿದೆ. ಸೇಡಂ ಪುರಸಭೆಯಲ್ಲಿ ಕಿರಿಯ ಇಂಜಿನಿಯರ್ ಆಗಿದ್ದ ಅಶೋಕ್ ಪುಟಪಾಕ್ ರವರನ್ನು ಕೊಡಗು ಜಿಲ್ಲೆಯ ಮಡಿಕೇರಿ ನಗರಸಭೆಯಲ್ಲಿ ಖಾಲಿಯಿರುವ ಕಿರಿಯ ಇಂಜಿನಿಯರ್ ಹುದ್ದೆಗೆ ವರ್ಗಾವಣೆ ಮಾಡಿ ಜುಲೈ 09 ರಂದು ನಗರಾಭಿವೃದ್ಧಿ ಇಲಾಖೆ ಅಧೀನ ಕಾರ್ಯದರ್ಶಿಯವರು ಆದೇಶ ಹೊರಡಿಸಿದ್ದಾರೆ. ಕಿರಿಯ ಇಂಜಿನಿಯರ್ ಆಗಿದ್ದ ಅಶೋಕ್ ಪುಟಪಾಕ್ ಅವರು ಜನವರಿ 12 ರಂದು ತೀವ್ರ ಅನಾರೋಗ್ಯದ ಕಾರಣ ಮೃತಪಟ್ಟಿದ್ದರು. ಜ.13 ರಂದು ಚಿತ್ತಾಪುರ ತಾಲ್ಲೂಕಿನ ದಿಗ್ಗಾಂವ್ ಗ್ರಾಮದಲ್ಲಿ ಅಂತ್ಯ ಕ್ರಿಯೆಯು ನಡೆದು ಸರ್ಕಾರದಿಂದ ನೀಡಬೇಕಾದ ಸೌಲಭ್ಯಗಳು ಒದಗಿಸಿದ ಬಳಿಕವು ಮೃತಪಟ್ಟ ವ್ಯಕ್ತಿಯನ್ನು ವರ್ಗಾಯಿಸಿರುವುದು ಸರ್ಕಾರ ಯಾವ ರೀತಿಯಲ್ಲಿ ಕೆಲಸ ಮಾಡುತ್ತಿದೆ ಎಂಬುದನ್ನು ಎತ್ತಿ ತೋರಿಸುತ್ತಿದೆ. ಸರ್ಕಾರದ ಅಧಿಕಾರಿಗಳ ನಿರ್ಲಕ್ಷ್ಯ ಭ್ರಷ್ಟಾಚಾರವು ಮೃತ ಅಧಿಕಾರಿಯನ್ನು ವರ್ಗಾಯಿಸುವ ಆದೇಶವನ್ನು ಹೊರಡಿಸುತ್ತದೆ ಎಂದರೆ ಸರ್ಕಾರ ಮತ್ತು ಅದರ ಅಧಿಕಾರಿಗಳು ಯಾವ ಮಟ್ಟದಲ್ಲಿ ನಿದ್ದೆ ಮಾಡುತ್ತಿದ್ದಾರೆ ಎಂಬುದೇ ಅಚ್ಚರಿ. ಭ್ರಷ್ಟಚಾರವನ್ನು ಹೊದ್ದು ನಿದ್ದೆ ಮಾಡುತ್ತಿರುವ ಸರ್ಕಾರ ಹಾಗೂ ಅಧಿಕಾರಿಗಳನ್ನು ನಿದ್ದೆಯಿಂದ ಎಚ್ಚರಿಸುವ ಸಲುವಾಗಿ ಹಾಗೂ ಈ ರೀತಿಯ ಆದೇಶವನ್ನು ಹೊರಡಿಸುವ ಮೂಲಕ ಸರ್ಕಾರಕ್ಕೆ ಮುಜುಗರ ಉಂಟು ಮಾಡಿರುವ ಅಧಿಕಾರಿಗಳ ಮೇಲೆ ಸೂಕ್ತ ಶಿಸ್ತುಕ್ರಮ ಕೈಗೊಳ್ಳುವ ಮೂಲಕ ನಿದ್ದೆಯಿಂದ ಎಚ್ಚರಿಸುವ ನಿಟ್ಟಿನಲ್ಲಿ ಈ ವಿಷಯಗಳ ಬಗ್ಗೆ ಸೂಕ್ತ ತನಿಖೆ ನಡೆಸುವಂತೆ ಶೂನ್ಯ ವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಮಾನ್ಯ ಪೌರಾಡಳಿತ ಸಚಿವರ ಉತ್ತರ:**

ಮಾನ್ಯ ವೈದ್ಯಕೀಯ, ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ, ಜೀವನೋಪಾಯ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರು ದಿನಾಂಕ: 19.12.2023 ರಂದು ನೀಡಲಾದ ನಡವಳಿಯಲ್ಲಿ ಸೇಡಂ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಸೇಡಂ ಪುರಸಭೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ / ಸಿಬ್ಬಂದಿಗಳನ್ನು ಸಾರ್ವಜನಿಕ ದೂರುಗಳ ಮೇರೆಗೆ ಕೂಡಲೇ ಜಿಲ್ಲೆಯಿಂದ ಬೇರೆಡೆಗೆ ವರ್ಗಾಯಿಸುವಂತೆ ಕೋರಿರುತ್ತಾರೆ.

ಸಾರ್ವಜನಿಕ ದೂರಿನ ಹಿನ್ನಲೆಯಲ್ಲಿ ಸೇಡಂ ಪುರಸಭೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ನೌಕರರುಗಳನ್ನು ವರ್ಗಾಯಿಸುವಂತೆ ಕೋರಿರುವ ಶಿಫಾರಸ್ಸಿನಲ್ಲಿ ಶ್ರೀ ಅಶೋಕ್ ಪುಟಪಾಕ್, ಕಿರಿಯ ಅಭಿಯಂತರರು, ಇವರ ಹೆಸರು ಇರುತ್ತದೆ.

ಸಾರ್ವಜನಿಕ ದೂರಿನ ಹಿನ್ನಲೆಯಲ್ಲಿ, ಸದರಿಯವರನ್ನು ವರ್ಗಾಯಿಸಲು ಖಾಲಿ ಹುದ್ದೆಗಳ ಮಾಹಿತಿಯೊಂದಿಗೆ ದಿನಾಂಕ: 05.01.2024 ರಂದು ಕಡತ ಸಂಖ್ಯೆ: ನಅಇ 406 ಟಿಎಂಇ 2024 ಅನ್ನು ಮಂಡಿಸಲಾಗಿದೆ. ಈ ಸಂದರ್ಭದಲ್ಲಿ ಸಾರ್ವತ್ರಿಕ ವರ್ಗಾವಣೆ ಅವಧಿಯಾಗಿರುವುದಿಲ್ಲ ಮತ್ತು ಲೋಕಸಭಾ ಸಾರ್ವತ್ರಿಕ ಚುನಾವಣೆ ನೀತಿ ಸಂಹಿತೆ ಜಾರಿಗೆ ಬಂದಿರುತ್ತದೆ.

. . . 2.

ಲೋಕಸಭಾ ಸಾರ್ವತ್ರಿಕ ಚುನಾವಣಾ ಮಾದರಿ ನೀತಿ ಸಂಹಿತೆ ಮುಗಿದ ನಂತರ ಈ ಕಡತವನ್ನು ದಿನಾಂಕ: 12.06.2024 ರಂದು ಪುನಃ ಸಲ್ಲಿಸಲಾಗಿದೆ. 2024ರ ಸರ್ಕಾರಿ ಅಧಿಕಾರಿ/ನೌಕರರ ವರ್ಗಾವಣೆಯ ಕುರಿತಂತೆ ಸಾರ್ವತ್ರಿಕ ವರ್ಗಾವಣೆಯ ಅವಧಿ ಜಾರಿಯಲ್ಲಿದುದ್ದರಿಂದ ದಿನಾಂಕ: 06.07.2024 ರಂದು ಈ ವರ್ಗಾವಣೆ ಪ್ರಕರಣಗಳ ಕುರಿತು ಅನುಮೋದಿಸಲಾಗಿದೆ. ಸದರಿ ಕಡತವು ದಿನಾಂಕ: 09.07.2024 ರಂದು ನಗರಾಭಿವೃದ್ಧಿ ಇಲಾಖೆಯಲ್ಲಿ ಸ್ವೀಕೃತವಾಗಿದ್ದು, ದಿನಾಂಕ: 09.07.2024 ರಂದು ವರ್ಗಾವಣೆ ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಮೇಲೆ ವಿವರಿಸಿರುವ ಕಾರಣಗಳಿಂದ ದಿವಂಗತ ಅಶೋಕ್ ಪುಟಪಾಕ್, ಹಿಂದಿನ ಕಿರಿಯ ಅಭಿಯಂತರರು, ಸೇಡಂ ಇವರು ಮೃತರಾಗಿರುವ ವಿಷಯವು ಸರ್ಕಾರದ ನಗರಾಭಿವೃದ್ಧಿ ಇಲಾಖೆಯಲ್ಲಿ ಲಭ್ಯವಿರುವುದಿಲ್ಲ. ಇದರಿಂದ ದಿನಾಂಕ: 09.07.2024 ರಂದು ವರ್ಗಾವಣೆ ಆದೇಶವನ್ನು ಹೊರಡಿಸಲಾಗಿರುತ್ತದೆ. ಈ ವಿಷಯವು ದಿನಾಂಕ: 10.07.2024 ರಂದು ಮುಖ್ಯಾಧಿಕಾರಿ ಪುರಸಭೆ, ಸೇಡಂ ಇವರಿಂದ ತಿಳಿದು ಬಂದ ಕೂಡಲೇ ಮರಣ ಪ್ರಮಾಣ ಪತ್ರವನ್ನು ಪಡೆದು ದಿನಾಂಕ: 12.07.2024 ರಂದು ಸದರಿ ವರ್ಗಾವಣೆ ಆದೇಶವನ್ನು ಹಿಂಪಡೆಯಲಾಗಿದೆ.

ಈ ಪ್ರಕರಣದಲ್ಲಿ ಮೃತ ನೌಕರರ ಮಾಹಿತಿ/ ಮರಣ ಪ್ರಮಾಣ ಪತ್ರವು ಸರ್ಕಾರದಲ್ಲಿ ಲಭ್ಯವಿಲ್ಲದೆ ಇರುವುದರಿಂದ ವರ್ಗಾವಣೆ ಆದೇಶ ಹೊರಡಿಸಲಾಗಿದೆ.

---

**ಕಡತ ಸಂಖ್ಯೆ: ನಅಇ 45 ಎಲ್‌ಸಿಕ್ಯೂ 2024**

ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು